ಪಿಡಬ್ಲ್ಯೂ:1

## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 463/2023

**ಸಾಕ್ಷಿಯನ್ನು ದಿಃ 27.06.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜೆ.ಎನ್.ಕೆ ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ ಓದಿದ್ದೇನೆ. ನನಗೆ ಕನ್ನಡ ಓದಲು ಬರುತ್ತದೆ. ಪೊಲೀಸರ್ ಠಾಣೆಯಲ್ಲಿ ನಾನು ಎಷ್ಟು ಬಾರಿ ಹೇಳಿಕೆ ಕೊಟ್ಟಿದ್ದೇನೆ ಎಂದು ನನಗೆ ನೆನಪಿಲ್ಲ. ದೂರನ್ನು ನಾನೇ ಕೊಟ್ಟಿರುತ್ತೇನೆ. ಸದರಿ ದೂರನ್ನು ಪೊಲೀಸನವರೆ ಬರೆದಿರುತ್ತಾರೆ. ಈಗ 15 ವರ್ಷ. ದಿಃ 15.01.2023 ರಂದು ಅಪಘಾತ ಆಗಿರುತ್ತದೆ. ಆಗ ನಾನು 8 ನೇ ತರಗತಿ ಓದುತ್ತಿದ್ದೆ, 12 ವರ್ಷ ಆಗಿತ್ತು. ಪೊಲೀಸರ ಮುಂದೆ ಹೇಳಿಕೆ ಕೊಡುವ ಸಮಯದಲ್ಲಿ ನನ್ನ ಜೊತೆ ನಗರ ಸಭೆ ಕೌನ್ಸಿಲ್ ಮೊಹಮ್ಮದ್ ಯೂನಸ್ ಎಂಬುವವರು ಇದ್ದರು. ದೂರನ್ನು ಮೊಹಮ್ಮದ್ ಯೂನಸ್ ರವರೇ ಹೇಳಿ ಬರೆಸಿದ್ದರು. ದೂರಿನಲ್ಲಿ ಏನೆ ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ಅಪಘಾತ ಆಯಿತು ಎನ್ನಲಾದ ದಿನ ಹೆಜ್ಜೂರು ಜಾತ್ರೆಗೆ ಹೋಗಿ ಬರುತ್ತಿದ್ದೆ. ಆಟೋದಲ್ಲಿ ನಾನು ಮತ್ತು ಮಾವ ಇಬ್ಬರು ಇದ್ದೇವು. ಅದು ಗೂಡ್ಸ ಆಟೋ ಇದ್ದು, ನಾನು ಹಿಂಭಾಗದಲ್ಲಿ ಕೂತಿದ್ದೆ. ನಾನು ಎಷ್ಟು ಎತ್ತರದಲ್ಲಿ ಇದ್ದೇನೆ ಎಂದು ನನಗೆ ಗೊತ್ತಿಲ್ಲ. ಆಟೋದ ಕ್ಯಾಬಿನ್ ಹಿಂದೆ ನಿಂತಿದ್ದೆ. ಗೂಡ್ಸ್ ಆಟೋ ಡ್ರೈವರ್ ಇರುವ ಕ್ಯಾಬಿನ್ 6 1/2 ಅಡಿ ಇದ್ದು, ನನ್ನ ಮುಂದೆ ಹೋಗುವ ಬರುವ ವಾಹನಗಳು ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಗೂಡ್ಸ್ ಆಟೋದಲ್ಲಿ ಯಾವುದೆ ಲೋಡ್ ತರುತ್ತಿರಲಿಲ್ಲ ಖಾಲಿ ಇತ್ತು. ಸದರಿ ಗೂಡ್ಸ್ ಆಟೋದಲ್ಲಿ ಕಬ್ಬಿಣದ ಜ್ಯೂಸ್

ಯಂತ್ರವನ್ನು ತೆಗೆದುಕೊಂಡು ಬರುತ್ತಿದ್ದೇವು ಎಂದರೆ ಸರಿಯಲ್ಲ ಅದನ್ನು ಇಳಿಸಿ ಬರುತ್ತಿದ್ದೇವು. ಅಂತಹ ಮೂರು ಚಕ್ರದ ಗೂಡ್ಸ್ ವಾಹನವನ್ನು ಅತಿವೇಗವಾಗಿ ಓಡಿಸಿದರೆ ಪಲ್ಟಿ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಎದುರಿನಿಂದ ಎಕ್ಸ್ ಗಾಡಿ ಬಂದಿರುತ್ತದೆ. ಅದನ್ನು ಯಾರು ಓಡಿಸಿಕೊಂಡು ಬಂದರು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ಮಾವ ರಫೀಕ್ ಖಾನ್ ಮಧ್ಯಪಾನ ಮಾಡಿ ಗಾಡಿ ಓಡಿಸುತ್ತಿದ್ದರು ಎಂದರೆ ಸರಿಯಲ್ಲ.

ಆರೋಪಿ ಮತ್ತು ನಾನು ಹುಣಸೂರಿನ ಶಬ್ಬೀರ್ ನಗರದವರು ಎಂದರೆ ಸರಿ. ಸಾಮಾನ್ಯವಾಗಿ ಒಂದೇ ಊರಿನವರಾದ ಕಾರಣ ಅವರ ಹೆಸರು ವಿಳಾಸ ಗೊತ್ತಿರುತ್ತದೆ ಎಂದರೆ ಸಾಕ್ಷಿ ವಿಳಾಸ ಗೊತ್ತಿಲ್ಲ, ಮುಖ ಪರಿಚಯ ಇರುತ್ತದೆ. ದೂರಿನಲ್ಲಿ ಯಾರೊ ಒಬ್ಬ ಅಡ್ಡಾದಿಡ್ಡಿ ಯಾಗಿ ಓಡಿಸಿಕೊಂಡು ಕ್ಯಾಬಿನ್ ಗೆ ಹೊಡಿದ್ದರು ಎಂದು ಹೇಳಿದ್ದರು ಅವರ ಹೆಸರು ವಿಳಾಸ ಹೇಳಿರುವುದಿಲ್ಲ ಎಂದರೆ ಸರಿ. ಆರೋಪಿ ಆಂಬ್ಯೂಲೆನ್ಸ್ ವಾಹನ ಓಡಿಸುತ್ತಾರೆ ಎಂದರೆ ಸರಿ. ನಮ್ಮ ಊರಿನವರೇ ಆಂಬ್ಯೂಲೆನ್ಸ್ ಚಾಲಕ ನಿದ್ದರೆ ಅವರ ಹೆಸರು ವಿಳಾಸ ಗೊತ್ತಿರುತ್ತದೆ ಎಂದರೆ ಸರಿ. ಆ ದಿನ ಸದರಿ ವ್ಯಕ್ತಿಯ ಪರಿಚಯ ಇದ್ದರು, ಯಾವುದೊ ಅಪರಿಚತ ವ್ಯಕ್ತಿ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಮತ್ತು ಮೃತ ರಫೀಕ್ ನಡುವೆ ಹಣಕಾಸಿನ ವ್ಯವಹಾರ ಇದ್ದು ಆ ಸಂಬಂಧ ಮಸೀದಿಯಲ್ಲಿ ತಿರ್ಮಾಣ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತನ ವಾಹನ ಬಿಳಿ ಬಣ್ಣದ್ದೂ ಹಾಗೂ ಅಪಘಾತ ಪಡಿಸಿದ ವಾಹನದ ಬಣ್ಣವೂ ಬಿಳಿ ಬಣ್ಣದ್ದು ಅದಕಾರಣ ಪೊಲೀಸರು ಯಾರ ಮೇಲಾದರೂ ಅನುಮಾನ ಇದ್ದರೆ ಹೆಸರುಹೇಳಿ ಎಂದಿದ್ದು ಆರೋಾಪಿತನ ಹೆಸರು ಹೇಳಿರುತ್ತೇನೆ. ಮೃತನ ಕುಟುಂಬಕ್ಕೆ ವಿಮಾ ಪರಿಹಾರ ಪಡೆಯಲು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ಯಾಬಿನ್ ನನಗಿನಂತ ಎತ್ತರ ಇದ್ದ ಕಾರಣ ಸದರಿ ಅಪಘಾತ

ಯಾವ ವಾಹನದಿಂದ ಆಯಿತು ಎಂದು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. ಮೊಹಮ್ಮದ್ ಯೂನೀಸ್ ಎಂಬುವವರು ಹೇಳಿದ ಹಾಗೆ ದೂರು ಬರೆದಿದ್ದು, ಅದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿತನನ್ನು ಸ್ಥಳದಲ್ಲಿ ನೋಡಿಲ್ಲ ಎಂದರೆ ಸರಿಯಲ್ಲ. ಪೊಲೀಸರೆ ಆತನನ್ನು ಆರೋಪಿ ಎಂದು ಹೇಳಿದಾಗ ನೋಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)

ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.ಹುಣಸೂರು.